ರೋಷಾವೇಷದಿಂದ ಕೇಳುತ್ತಾನೆ. ಸಭಿಕರೆಲ್ಲ ಎದ್ದು ನಿಂತು ಚಪ್ಪಾಳೆ ತಟ್ಟುತ್ತ, 'ಯಸ್... ಯಸ್...' ಎಂದು ಕೂಗುತ್ತಾರೆ. ಆ ವಿಡಿಯೊ ನೋಡಿ ನಾನು ಅಚ್ಚರಿಪಟ್ಟಿದ್ದಿದೆ; ಅದು ಹೇಗೆ ಅಷ್ಟೊಂದು ಜನ ಸಾಮೂಹಿಕವಾಗಿ ತಮಗೆ ಹಿತವಲ್ಲದ್ದನ್ನು ಒಪ್ಪಿಕೊಳ್ಳಲು ಸಾಧ್ಯ? ಅದರಲ್ಲಿ ಯಾರೊಬ್ಬನಿಗಾದರೂ ತಾನೊಂದು ಭೀಕರ ಸಂಗತಿಗೆ ಸಮ್ಮತಿ ಸೂಚಿಸುತ್ತಿರುವೆ ಅನ್ನಿಸಿರಲಿಕ್ಕಿಲ್ಲವೇ? ಅಥವಾ ಅನ್ನಿಸಿದರೂ ವ್ಯಕ್ತಪಡಿಸಲು ಆಗುತ್ತಿರಲಿಲ್ಲವೇ?... ಇತ್ಯಾದಿ. ಇವೆಲ್ಲಾ ಯೋಚಿಸುತ್ತಿರುವಾಗ ತೊಂಬತ್ತರ ದಶಕದಲ್ಲಿ ದೇಶದಾದ್ಯಂತ ಸಂಚಲನ ಮೂಡಿಸಿದ್ದ ಘಟನೆಯೊಂದು ನೆನಪಾಗುತ್ತದೆ.

ನನ್ನ ಕಾಲೇಜಿನ ದಿನಗಳವು. ಹೀಗೊಂದು ದಿನ ಧುತ್ತನೆ, ಗಣಪನ ವಿಗ್ರಹ ಹಾಲು ಕುಡಿಯುತ್ತದೆಂಬ ಸುದ್ದಿ ದೇಶದೆಲ್ಲೆಡೆ ಕಾಳ್ಗಿಚ್ಚಿನಂತೆ ಹಬ್ಬಿಬಿಟ್ಟಿತ್ತು. ಪ್ರತಿ ಬೀದಿಯ ಒಂದಿಲ್ಲೊಂದು ಮನೆ ಅಥವಾ ದೇವಸ್ಥಾನದಲ್ಲಿ ಜನ ಮುಗಿಬಿದ್ದು ಗಣೇಶನಿಗೆ ಹಾಲು ಕುಡಿಸುತ್ತಿರುವ ಸಂಗತಿ ಮಾಮೂಲಿಯಾಗಿತ್ತು. (ಸದ್ಯ, ಇವತ್ತಿನ ಈ ಬಗೆಯ ಟೀವಿ ಮಾಧ್ಯಮವೊಂದಿರಲಿಲ್ಲ ಆಗ!) ನಾವೊಂದಿಷ್ಟು ಜನ ಗೆಳೆಯರು ಸೇರಿ ಅದೆಲ್ಲ ಭ್ರಮೆ, ವಿಗ್ರಹ ಹಾಲು ಕುಡಿಯಲು ಸಾಧ್ಯವೇ ಇಲ್ಲ ಎಂದು ವಾದಿಸುತ್ತ ಎಲ್ಲರ ದೃಷ್ಟಿಯಲ್ಲಿ ವಿಲನ್‌ಗಳಾದೆವು. ನಮ್ಮ ಉದ್ಧಟತನಕ್ಕೆ ಮುನಿಸಿಕೊಂಡ ಗುಂಪೊಂದು, ನಾನಿರುವ ವಠಾರದ ಪಕ್ಕದ ಮನೆಯಲ್ಲಿಯೇ ಗಣೇಶ ಹಾಲು ಸೇವಿಸುತ್ತಿರುವುದಾಗಿಯೂ, ನಾನೇ ಖುದ್ದಾಗಿ ಬಂದು ಕೈಯಾರೆ ಕುಡಿಸಿ ನೋಡಬೇಕೆಂದು ತಾಕೀತು ಮಾಡಿತು. ಇಂಥ ಆಹ್ವಾನ ನನಗೂ ಬೇಕಾಗಿತ್ತಾದ್ದರಿಂದ ಎದೆಯುಬ್ಬಿಸಿ ನಾನೂ ಅಲ್ಲಿಗೆ ಹೋದೆ. ಆಗಲೇ ಸಾಕಷ್ಟು ಜನ ಅಲ್ಲಿ ನೆರೆದಿದ್ದರು. ಅಲ್ಲಿ ಅದೆಂತಹ ಉತ್ಕಟ ಭಾವ ಪರವಶತೆಯ ಸನ್ನಿವೇಶ ಸೃಷ್ಟಿಯಾಗಿತ್ತೆಂದರೆ, ಗಣಪನ ಸೊಂಡಿಲೆದುರು ಹಾಲಿನ ಚಮಚ ಹಿಡಿದ ನನ್ನ ಕೈ ಸಣ್ಣಗೆ ಕಂಪಿಸತೊಡಗಿತ್ತು. 'ನೋಡು ಚಮಚೆಯಲ್ಲಿನ ಹಾಲು ಖಾಲಿಯಾಗುತ್ತಿದೆ...' – ಯಾರೋ ಒಬ್ಬ ಆವೇಶದಿಂದ ಹೇಳಿದ. ಹೌದು ಹೌದೆಂದರು ಉಳಿದವರು. ಹಾಲು ಚೆಲ್ಲಿ ವಿಗ್ರಹದ ಮೈಮೇಲೆ ಹರಿದು ಹೋಗುತ್ತಿರುವುದು ಕಣ್ಣೆದುರೇ ಕಾಣುತ್ತಿದ್ದರೂ, ಯಾರೂ ನಂಬುವ ಸ್ಥಿತಿಯಲ್ಲಿರಲಿಲ್ಲ. 'ಸ್ವಲ್ಪ ಪ್ರಮಾಣವಷ್ಟೇ ಹೊರಗೆ ಚೆಲ್ಲಿರಬಹುದು, ಆದರೆ ಚಮಚದಲ್ಲಿದ್ದ ಅರ್ಧಕ್ಕೂ ಹೆಚ್ಚು ಹಾಲನ್ನು ವಿಗ್ರಹ ಹೀರಿದೆ' ಎನ್ನುವ ಅಭಿಮತವೇ ಎಲ್ಲರದೂ ಆಗಿತ್ತಲ್ಲಿ. ಆ ಕ್ಷಣಕ್ಕೆ ನನಗೂ ಹಾಗೇ ಅನ್ನಿಸಿತೋ ಗೊತ್ತಿಲ್ಲ, ಆದರೆ ಅವರೆದುರು ನನ್ನ ವಾದ ಮಂಡಿಸುವ ಧೈರ್ಯವಂತೂ ಬರಲಿಲ್ಲ. ಆ ಘಟನೆಗೂ, ಗೊಬೆಲ್ಸ್‌ನ ವಿಡಿಯೊದಲ್ಲಿರುವ ಸಂಗತಿಗೂ ಯಾವುದೇ ನೇರ ಸಂಬಂಧ ಯಾ ಹೋಲಿಕೆಯಿಲ್ಲದಿದ್ದರೂ, ಎರಡರಲ್ಲೂ ಕಾಣಬಹುದಾದ ಜನರ ವರ್ತನೆಯ ಮೂಲ ಒಂದೇ ಎನ್ನಿಸುತ್ತದೆ ನನಗೆ. ಎರಡೂ ಸಮೂಹ ಸನ್ನಿಯ ಬೇರೆ ಬೇರೆ ಪ್ರಕಾರಗಳಷ್ಟೇ.

ನೀವೇ ಗಮನಿಸಿ ನೋಡಿ, ಧನಾತ್ಮಕ ಸಂಗತಿಗಳಿಗಿಂತ ನೆಗೆಟಿವ್ ವಿಚಾರಗಳ ಸನ್ನಿಗೇ ಮನುಷ್ಯ ಬಲಿಪಶುವಾಗುವುದು ಹೆಚ್ಚು. ದ್ವೇಷ ಹರಡಿದಷ್ಟು ಸುಲಭದಲ್ಲಿ ಪ್ರೀತಿ ಪಸರಿಸಲು ಸಾಧ್ಯವಾಗುವುದಿಲ್ಲ. ಮನುಷ್ಯನ ಮೆದುಳು ಸದಾ ಋಣಾತ್ಮಕ ಸಂಗತಿಯನ್ನೇ ಯೋಚಿಸುವುದು ಇದಕ್ಕೆ ಕಾರಣವಿರಬಹುದು. ಅದೊಂಥರಾ ಪ್ರಾಣಿಗಳಲ್ಲಿರುವ 'ಸರ್ವೈವಲ್ ಇನ್‌ಸ್ಟಿಂಕ್ಟ್'ನಂತೆ. ಪ್ರಾಣಿಗಳು ಸದಾ ಕಾಲ ತಮ್ಮ ಮೇಲೇನಾದರೂ ಆಕ್ರಮಣವಾದೀತೆಂಬ ಎಚ್ಚರಿಕೆಯಲ್ಲೇ ಇರುತ್ತವಷ್ಟೇ; ಆದರೆ ನಾಗರಿಕ ಸಮಾಜದಲ್ಲಿಯ ಮನುಷ್ಯ ತನ್ನ ಮೇಲೆ ಯಾರಾದರೂ ಯಾವುದೇ ಸಂದರ್ಭದಲ್ಲಿ ಬಂದೆರಗಬಹುದೆಂದು ಆಲೋಚಿಸಲು ಸಾಧ್ಯವಿಲ್ಲ. ಅದರ ಬದಲು, ಆತ ತನಗೆ ಮುಂದೇನಾದರೂ ತೊಂದರೆಯಾದರೆ ಏನೆಂಬ ಚಿಂತೆಗೆ ತನ್ನನ್ನು ಸದಾಕಾಲ ಒಡ್ಡಿಕೊಂಡಿರುತ್ತಾನೆ. ಅದು ಆರ್ಥಿಕ ಸಂಗತಿಯಲ್ಲೇ ಆಗಲಿ, ಆರೋಗ್ಯದ ವಿಷಯವೇ ಆಗಲಿ, ಮಕ್ಕಳು ಸಂಬಂಧಗಳ ಬಗ್ಗೇ ಆಗಲಿ ಮನಸ್ಸು ನಕಾರಾತ್ಮಕ ಸಂಗತಿಗಳನ್ನೇ ಹೆಚ್ಚು ಯೋಚಿಸುತ್ತಿರುತ್ತದೆ. ಹೀಗಾಗಿ,